ತರೀಕೆರೆ ಪುರಸಭೆಯಂವರು ನಗರಾಭಿವೃದ್ಧಿಗಾಗಿ ೧೦ ಎಕರೆ ಭೂಮಿಯನ್ನು ಕೇಳಿರುವ ಬಗ್ಗೆ

*೫೫೯. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ಪುರಸಭೆಯವರು ಅರಣ್ಯ ಇಲಾಖೆಯಿಂದ ನಗರಾಭಿವೃದ್ಧಿಗಾಗಿ ಅರಣ್ಯ ಡಿಪೋನಲ್ಲಿ ೧೦ ಎಕರೆ ಜಮೀನನ್ನು ಕೇಳಿರುವುದು ನಿಜವೇ ?

ಆ) ಹಾಗಿದ್ದಲ್ಲಿ ನಗರಾಭಿವೃದ್ಧಿಗಾಗಿ ೧೦ ಎಕರೆ ಜಮೀನನ್ನು ಕೊಡಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಈ ಜಾಗವು ಡಿಪೋ ನಡೆಸುವುದಕ್ಕೆ ಬೇಕಾಗಿರುವುದರಿಂದ ಅವರ ಕೋರಿಕೆಯನ್ನು ಪರಿಶೀಲಿಸಿ ತಿರಸ್ಕರಿಸಲಾಗಿದೆ.

ಕೊಡಗಿನಲ್ಲಿ ರೇಷ್ಮೆ ಇಲಾಖೆಯ ಚಟುವಟಿಕೆ ಬಗ್ಗೆ

*೫೬೩. ಶ್ರೀಮತಿ ಸಂಪಾ ವಸಂತ್ (ವಿರಾಜಪೇಟೆ).—ಮಾನ್ಯ ರೇಷ್ಮೆ ಮಂತ್ರಿಗಳು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗಿನಲ್ಲಿ ರೇಷ್ಮೆ ಇಲಾಖೆ ಎಷ್ಟು ವರ್ಷದಿಂದ ಕಾರ್ಯ ಆರಂಭಿಸಿದೆ ?

ಆ) ಈ ಇಲಾಖೆಯವರ ತಾಲ್ಲೂಕುವಾರು ಚಟುವಟಿಕೆಗಳೇನು ?

ಇ) ಈವರೆಗೆ ಸರ್ಕಾರದವರು ಕೊಡಗು ಜಿಲ್ಲೆಗೆ ಖರ್ಚು ಮಾಡಿರುವ ಹಣವೆಷ್ಟು ?

ಈ) ಆ ಪ್ರದೇಶಕ್ಕೆ ಗಿರಿಜನರಿಗೆ ಸರ್ಕಾರದವರು ಒದಗಿಸಿರುವ ಸೌಲಭ್ಯಗಳೇನು ಮತ್ತು ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಕೆ. ಎಂ. ಮುನಿಯಪ್ಪ. (ರೇಷ್ಮೆ ಸಚಿವರು),—

ಅ) ೧೯೫೨.

ಆ) ಚಟುವಟಿಕೆಗಳನ್ನು ಕೆಳಗೆ ನಮೂದಿಸಲಾಗಿದೆ : —

ಸೋಮವಾರ ಪೇಟೆ ತಾಲ್ಲೂಕು :

೧ ಬಿತ್ತನೆ ಕಡ್ಡಿಗಳನ್ನು ಮತ್ತು ಬಿತ್ತನೆ ಗೂಡುಗಳನ್ನು ಒದಗಿಸುವ ಸಲುವಾಗಿ ರೇಷ್ಮೆ ಕೃಷಿ ಕ್ಷೇತ್ರದ ನಿರ್ವಹಣೆ.

೨ ವಿಸ್ತರಣಾ ಕೇಂದ್ರ, ರೇಷ್ಮೆ ಉದ್ಯಮದ ವಿಸ್ತರಣೆಗೆ ಕ್ರಮಕೈಗೊಳ್ಳುವ ಸಲುವಾಗಿ.

೩ ಚಾಕಿಸಾಕಾಣಿಕೆ ಕೇಂದ್ರಗಳ ನಿರ್ವಹಣೆ, ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳುಗಳನ್ನು ಎರಡನೇ ಹಂತದವರೆಗೆ ತಾಂತ್ರಿಕವಾಗಿ ಸಾಕಣೆ ಮಾಡಿ ಒದಗಿಸುವುದು.

೪ ಗಿರಿಜನ ಉಪಯೋಜನೆಯಲ್ಲಿ ಗಿರಿಜನ ರೇಷ್ಮೆ ಬೆಳೆಗಾರರಿಗೆ ಕಾಲೋನಿಗಳ ಸ್ಥಾಪನೆ, ಚಾಕಿ ಸಾಕಾಣಿಕೆಗೆ ಕಟ್ಟಡಗಳ ನಿರ್ಮಾಣ, ಕೊಳವೆ ಬಾವಿ, ತೋಡಿ ನೀರಾವರಿ ಸೌಲಭ್ಯ, ಹುಳು ಸಾಕುವ ಉಪಕರಣಗಳನ್ನು ಮುಫತ್ತಾಗಿ ಕೊಡುವುದು. ಇವೇ ಮುಂತಾದ ಸೌಲಭ್ಯಗಳನ್ನು ಒದಗಿಸುವುದು.

೫ ರೇಷ್ಮೆ ಉದ್ಯಮದಲ್ಲಿ ತರಬೇತಿ ನೀಡುವುದು.

೬ ವಿಶೇಷ ಘಟಕ ಯೋಜನೆ ಮತ್ತು ಕಾಡಾ ಯೋಜನೆಗಳಲ್ಲಿ ಹುಳು ಸಾಕುವ ಸಲಕರಣೆಗಳನ್ನು ಒದಗಿಸುವ ಸೌಲಭ್ಯ